

# ಭೀಮಬಲ



ಚಿತ್ರ: ತಾಜುದ್ದೀನ್ ಆಜಾದ್

ಈ ದೇಶದ ದಲಿತ ಹಾಗೂ ಅಸಹಾಯಕ ಸಮುದಾಯಗಳ ಪಾಲಿಗೆ ಅಂಬೇಡ್ಕರ್ ಒಂದು ಶಕ್ತಿ ಹಾಗೂ ಸ್ಫೂರ್ತಿ. ವ್ಯಕ್ತಿಗತವಾಗಿ ಹಾಗೂ ಸಾಮಾಜಿಕವಾಗಿ 'ತಮ್ಮತನ' ಕಂಡುಕೊಳ್ಳಲು ಹಂಬಲಿಸುವ ಯುವ ಸಮುದಾಯಕ್ಕೆ ಅಂಬೇಡ್ಕರ್ ಜೀವನ–ಸಾಧನೆಯೇ ಪ್ರೇರಣೆ. ವಿಚಾರಗಳ ಮಟ್ಟಿಗೆ ಮಾತ್ರವಲ್ಲದೆ, ಗುರು–ಗೆಳೆಯನ ರೂಪದಲ್ಲಿ, ಅಂತರಂಗದ ಮಿಡಿತದ ರೂಪದಲ್ಲಿ ಅಂಬೇಡ್ಕರ್ ಕೋಟ್ಯಂತರ ಯುವ ಮನಸ್ಸುಗಳಲ್ಲಿ ಭೀಮರಾಯರು ಜೀವಂತವಾಗಿದ್ದಾರೆ. ಇಂಥ ಅಮೃತರೂಪಿ ಅಂಬೇಡ್ಕರ್ ದೈನಿಕದ ಯಾವುದೋ ಸವಾಲು ಅಥವಾ ಸಮಸ್ಯೆಯ ಸಂದರ್ಭದಲ್ಲಿ ಧುತ್ತನೆ ಎದುರಾಗಿ, ನಮ್ಮ ಧ್ವನಿಯಾಗಿ ಜೀವದ್ರವ್ಯವಾಗಿ ಭೀಮಬಲವಾಗಿ ಜೊತೆಯಾಗುತ್ತಾರೆ. ಹೀಗೆ ಅಂಬೇಡ್ಕರ್ ತಮ್ಮ ಬದುಕಿನಲ್ಲಿ ಇದ್ದಕ್ಕಿದ್ದಂತೆ ಜೀವ ಜಾಗೃತಗೊಂಡ ಅಪೂರ್ವ ಕ್ಷಣಗಳ ಕುರಿತು ನಾಡಿನ ವಿವಿಧ ಕ್ಷೇತ್ರಗಳ ಸೃಜನಶೀಲ ಮನಸ್ಸುಗಳ ಕಿರು ಟಿಪ್ಪಣಿಗಳು ಇಲ್ಲಿವೆ. ಏಪ್ರಿಲ್ 14ರ 'ಅಂಬೇಡ್ಕರ್ ಜಯಂತಿ' ಸಂದರ್ಭದಲ್ಲಿ ಈ ಬರಹಗಳು 'ನಮ್ಮೊಳಗಿನ ಅಂಬೇಡ್ಕರ್' ಅವರನ್ನು ಒಮ್ಮೆ ತಡವಿಕೊಳ್ಳಲು ಪ್ರೇರೇಪಿಸುವಂತಿವೆ.

■ ನಿರ್ವಹಣೆ: **ಡಿ.ಎಂ. ಪ್ರಶಾಂತ ಕುರ್ಕೆ**